**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.**

**ಸಿ.ಸಿ. ನಂ- 170/2022**

**ಪಿರ್ಯಾದಿ :- ಪಿ ವೆಂಕಟಪ್ಪ**

**-ವಿರುದ್ಧ -**

**ಆರೋಪಿತರು :- ಬಿ ಎಸ್ ರಾಮಶೇಖರ ನಾಯ್ಕ**

**::ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ಅಡಿಯಲ್ಲಿ ಆರೋಪಿ ಹೇಳಿಕೆ::**

**ಆರೋಪಿ ಹೆಸರು: ಬಿ ಎಸ್ ರಾಮಶೇಖರ ನಾಯ್ಕ ಬಿನ್ ಸಿದ್ದಾನಾಯ್ಕ, ನಿವೃತ್ತ ಶಿಕ್ಷಕರು, ಎಸ್ ಬಿದರೆ ಗ್ರಾಮ ಮತ್ತು ಅಂಚೆ, ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ.**

ಪ್ರಶ್ನೆ:1-ಅಭಿಯೋಗದ ಪರ ವಿಚಾರಣೆಯಾಗಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದಿರುವಿರಾ?

ಉತ್ತರ:

**ಪ್ರಶ್ನೆ-2 ಅಸಾ-1 ಇವರು ತಮ್ಮ** ಸಾಕ್ಷ್ಯದಲ್ಲಿ ಆರೋಪಿಯು ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿಯು ದಿ:20.02.2021 ರಂದು ನನ್ನ ಬಳಿ ಬಂದು ತಮ್ಮ ದುರುದ್ದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗಾಗಿ ಮತ್ತು ಆರೋಪಿಯು ಮಾಡಿರುವ ಕೈಸಾಲ ತೀರಿಸುವ ಉದ್ದೇಶದಿಂದ ರೂ.3,50,000-00 ಹಣದ ಅವಶ್ಯಕತೆ ಇದೆ ಕೊಡಿ ಎಂದು ಕೇಳಿದಾಗ ಅವರ ಕೋರಿಕೆಯನ್ನು ಮನ್ನಿಸಿ, ಅದೇ ದಿನದಂದು ರೂ.3,50,000-00 ಗಳನ್ನು ಆರೋಪಿಗೆ ನಗದಾಗಿ ನೀಡಿರುವುದಾಗಿ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

**ಪ್ರಶ್ನೆ-3** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯು ರೂ.3,50,000-00 ಗಳನ್ನು ಪಡೆದುಕೊಂಡು ಸದರಿ ಹಣದ ಮರುಪಾವತಿಗಾಗಿ ತಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಅರೇಹಳ್ಳಿ ಶಾಖೆಯ ಚೆಕ್ ನಂ: 847567 ರಲ್ಲಿ ರೂ.3,50,000-00 ಗಳನ್ನು ಹಾಗೂ ಮುಂಗಡ ದಿನಾಂಕ: 07-10-2021 ಎಂದು ನಮೂದಿಸಿ, ಅದರ ಮೇಲೆ ಸಹಿ ಮಾಡಿ, ಈಗ ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ, ದಿ: 07-10-2021 ರಂದು ನಿಮಗೆ ಕೊಡಬೇಕಾದ ಸಾಲದ ಹಣ ರೂ. 3,50,000/- ಗಳನ್ನು ಮೇಲ್ಕಂಡ ನನ್ನ ಖಾತೆಗೆ ಭರಿಸುತ್ತೇನೆ, ಸದರಿ ದಿನಾಂಕದಂದು ಮೇಲ್ಕಂಡ ಬ್ಯಾಂಕ್ ಗೆ ಹಾಜರುಪಡಿಸಿ ಹಣ ಪಡೆದುಕೊಳ್ಳುವಂತೆ ತಿಳಿಸಿ, ಚೆಕ್ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

**ಪ್ರಶ್ನೆ-4** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿಃ 07-10-2021 ರಂದು ತಾನು ಖಾತೆ ಹೊಂದಿರುವ ಕೆನರಾ ಆಫ್ , ಬೇಲೂರು ಶಾಖೆಯ ಬ್ಯಾಂಕ್ ಮೂಲಕ ಆರೋಪಿಯ ಬ್ಯಾಂಕ್‌ಗೆ ಚೆಕ್ ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಬ್ಯಾಂಕ್ ನವರು ಸದರಿ ಚೆಕ್ ನ್ನು ಪರಿಶೀಲಿಸಿ ಆರೋಪಿಯ ಅಕೌಂಟ್ ಕ್ಲೋಸ್ ಎಂಬ ಕಾರಣವನ್ನು ನೀಡಿ, ಆರೋಪಿಯ ಚೆಕ್ ನಗದಾಗಿಸಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿ ವಾಪಸ್ಸು ನೀಡಿರುವುದಾಗಿ ಮತ್ತು ನಂತರ ನಾನು ಆರೋಪಿಯನ್ನು ಖುದ್ದಾಗಿ ಭೇಟಿ ಮಾಡಿ ಮೇಲ್ಕಂಡ ವಿದ್ಯಾಮಾನಗಳೆನ್ನೆಲ್ಲಾ ತಿಳಿಸಿ ಸಾಲವಾಗಿ ಪಡೆದಿರುವ ಹಣ ರೂ. 3,50,000/- ಗಳನ್ನು ವಾಪಸ್ ಕೊಡುವಂತೆ ತಗಾದೆ ಮಾಡಿದಾಗ ಆರೋಪಿಯು ಹಣವನ್ನು ನೀಡದೇ, ಸಮರ್ಪಕವಾಗಿ ಸ್ಪಂದಿಸದೆ ಉಡಾಫೆ ಉತ್ತರವನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು? ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

**ಪ್ರಶ್ನೆ-5** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತಮ್ಮ ವಕೀಲರ ಮೂಲಕ ದಿಃ 13-10-2021 ರಂದು ಆರೋಪಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸ್ ನೀಡಿ, ಸದರಿ ಸಾಲದ ಹಣವನ್ನು ಮರು ಪಾವತಿಸುವಂತೆ ತಗಾದೆ ಮಾಡಿದ್ದು, ಸದರಿ ನೋಟೀಸ್ ದಿಃ 18-10-2021 ರಂದು ಆರೋಪಿಗೆ ಜಾರಿಯಾಗಿರುತ್ತದೆ. ಸದರಿ ನೋಟೀಸಿನ ವಿಚಾರ ಗೊತ್ತಿದ್ದರೂ ಸಹ ಹಣವನ್ನು ಆರೋಪಿಯು ಪಿರ್ಯಾದಿಗೆ ಹಣವನ್ನು ಮರು ಪಾವತಿಸದೇ ಹಾಗೂ ಸದರಿ ನೋಟೀಸ್‌ಗೆ ಮರು ಉತ್ತರವನ್ನು ನೀಡದೇ, ಆರೋಪಿಯು ಸಾಲ ಮರುಪಾವತಿಗಾಗಿ ನೀಡಿದ ಚೆಕ್ ಅಮಾನ್ಯಗೊಳ್ಳುವಂತೆ ಮಾಡಿ, ಪಿರ್ಯಾದಿಗೆ ವಂಚಿಸಿ ಮೋಸಗೊಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ6 ನಿಮ್ಮ ಪರ ಪರೀಕ್ಷಿಸುವ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ

ಪ್ರಶ್ನೆಃ7 ನೀವು ಹೇಳುವುದು ಏನಾದರೂ ಇದೆಯೇ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದಿನಾಂಕಃ 08-01-2024 ರಂದು ಓದಿ ಹೇಳಿ ಅವರಿಂದ ಬಂದ ಉತ್ತರವನ್ನು ಯಥವತ್ತಾಗಿ ಸ್ವಹಸ್ತಾಕ್ಷರದಿಂದ ದಾಖಲು ಮಾಡಿಕೊಳ್ಳಲಾಯಿತೆಂದು ದೃಢೀಕರಿಸಲಾಗಿದೆ)

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ಬೇಲೂರು.**